# ಸೌಂಡ್ ಎಂಜಿನಿಯರ್ ಜೊತೆಗೆ ಶ್ರುತಿ

■ ಪದ್ಮನಾಭ ಭಟ್

ಸೂರಿ ಗರಡಿಯಲ್ಲಿ ಪಳಗಿದ, ತೆರೆಮರೆಯಲ್ಲಿ 'ಸಲಗ'ನ ಮಾವುತನಾಗಿ ಕೆಲಸ ಮಾಡಿದ್ದ ಹುಡುಗ ಅಭಿ ಈಗ ನಿರ್ದೇಶನದ ಕುರ್ಚಿಯಲ್ಲಿ ಆಸೀನರಾಗುತ್ತಿದ್ದಾರೆ. 'ಸೋಮು ಸೌಂಡ್ ಎಂಜಿನಿಯರ್' ಎನ್ನುವುದು ಅವರ ಸಿನಿಮಾ ಹೆಸರು. ಸೂಪರ್ ಹಿಟ್ ಚಿತ್ರಗಳಾದ 'ಟಗರು' ಮತ್ತು 'ಸಲಗ'ದ ತಂತ್ರಜ್ಞರೆಲ್ಲರೂ ಈ ಸಿನಿಮಾಕ್ಕೆ ಕೆಲಸ ಮಾಡುತ್ತಿರುವುದು ಇದರ ಕುರಿತು ಕುತೂಹಲವನ್ನು ಹೆಚ್ಚಿಸಿದೆ. ಅಭಿ ಸಿನಿಮಾ ಹೆಸರನ್ನು ತಮ್ಮ ಗುರು ಸೂರಿ ಅವರ ಕೈಯಲ್ಲೇ ರಿವೀಲ್ ಮಾಡಿಸಿದ್ದು ಸಾಕಷ್ಟು ಸುದ್ದಿಯಾಗಿತ್ತು. 'ಸಲಗ' ಸಿನಿಮಾದಲ್ಲಿ ಗಮನಸೆಳೆದಿದ್ದ ಶ್ರೇಷ್ಠ ಈ ಚಿತ್ರದ ನಾಯಕ. ಅವನ ಜೊತೆಗೆ ತೆರೆಯನ್ನು ಹಂಚಿಕೊಳ್ಳುತ್ತಿರುವುದು ಉತ್ತರ ಕರ್ನಾಟಕದ ಹುಡುಗಿ ಶ್ರುತಿ ಪಾಟೀಲ್.

ಕಿರುತೆರೆ ಧಾರಾವಾಹಿ ಮೂಲಕ ನಟನಾಪಯಣ ಆರಂಭಿಸಿದ್ದ ಶ್ರುತಿ ಸಿನಿಮಾ ರಂಗಕ್ಕೆ ಅಡಿಯಿರಿಸಿ ವರ್ಷಗಳೇ ಕಳೆದಿವೆ. ಆದರೆ ಕೊರೊನಾ ಕಾರಣಕ್ಕೆ ಅವರಿಗಿನ್ನೂ ಹಿರಿತೆರೆಯ ಮೇಲೆ ತಮ್ಮ ಛಾಪು ಒತ್ತಲು ಸಾಧ್ಯವಾಗಿಲ್ಲ. ಈಗ ಅಂಥದ್ದೊಂದು ಅವಕಾಶವಾಗಿ 'ಸೋಮು...'ವಿನ ಬಳಗಕ್ಕೆ ಕರೆ ಬಂದಿದೆ. ಈ ಕರೆಯನ್ನು ಖುಷಿಯಿಂದಲೇ ಸ್ವೀಕರಿಸಿದ್ದಾರೆ ಶ್ರುತಿ.

'ನನಗೆ ಈ ಅವಕಾಶ ಸಿಗಲು ಕಾರಣ 'ಬ್ಲಡ್ ಹ್ಯಾಂಡ್' ಸಿನಿಮಾ ನಿರ್ದೇಶಕ ಆದಿ. ಅವರು ಮಾಸ್ತಿ ಅವರಿಗೆ ನನ್ನ ಹೆಸರು ಶಿಫಾರಸ್ಸು ಮಾಡಿದರು. ಮಾಸ್ತಿ ಅವರು 'ಸೋಮು ಸೌಂಡ್ ಎಂಜಿನಿಯರ್' ಸಿನಿಮಾ ತಂಡದಲ್ಲಿದ್ದಾರೆ. ಅವರು ನನಗೆ ಕಾಲ್ ಮಾಡಿ ಹೀಗೊಂದು ಸಿನಿಮಾ ಇದೆ. ಆಸಕ್ತಿ ಇದ್ದರೆ ಆಫೀಸಿಗೆ ಬರ್ತೀರಾ ಎಂದು ಕೇಳಿದರು. ಮಾಸ್ತಿ ಅವರಿಗೆ ಚಿತ್ರರಂಗದಲ್ಲಿ ಒಳ್ಳೆಯ ಹೆಸರಿದೆ. ಹಾಗಾಗಿ ಅವರು ಕೆಲಸ ಮಾಡುವ ಸಿನಿಮಾನೂ ಚೆನ್ನಾಗಿಯೇ ಇರುತ್ತದೆ ಎಂಬ ನಂಬಿಕೆಯಿಂದಲೇ ಹೋದೆ. ಆಗ ನನಗೆ ಸಿನಿಮಾ ಹೆಸರು, ತಂಡ ಯಾವುದರ ಬಗ್ಗೆಯೂ ಮಾಹಿತಿ ಇರಲಿಲ್ಲ. ಅವರ ಆಫೀಸಿನಲ್ಲಿ ಅಭಿ ಇದ್ದರು. ಅಭಿ, ಸೂರಿ ಅವರ ಬಳಿ ಹತ್ತು ಹದಿನೈದು ವರ್ಷಗಳಿಂದ ಸಹಾಯಕನಾಗಿ ಕೆಲಸ ಮಾಡಿದ್ದರು. ಅವರ ಕಥೆಗೆ ಉತ್ತರ ಕರ್ನಾಟಕದ ಭಾಷೆ ಗೊತ್ತಿರುವ, ನೋಡಲು ಮುಗ್ಧವಾಗಿ ಕಾಣಿಸುವ ಹುಡುಗಿ ಬೇಕಾಗಿತ್ತು. ನಾನು ಆ ಪಾತ್ರಕ್ಕೆ ಹೊಂದುತ್ತೇನೆ ಎಂದು ಅವರಿಗೆ ಅನಿಸಿತಂತೆ. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಸೌಮ್ಯಾ. ನಿಮ್ಮ ವರ್ತನೆಯೂ ಸೌಮ್ಯವೇ ಆಗಿರಬೇಕು. ಸದಾ ಶಾಂತವಾಗಿರುವ, ಭಾವುಕ ಹುಡುಗಿ ಎಂದಷ್ಟೇ ಹೇಳಿದ್ದಾರೆ. ಅದರಾಚೆಗೆ ಸಿನಿಮಾದ ಕಥೆ, ನನ್ನ ಪಾತ್ರದ ಕುರಿತೂ ನನಗೆ ಇನ್ನೂ ಗೊತ್ತಿಲ್ಲ. ಆ ತಂಡವನ್ನು ನೋಡಿಯೇ ನಾನು ಸಿನಿಮಾ ಒಪ್ಪಿಕೊಂಡುಬಿಟ್ಟೆ' ಎಂದು 'ಸೋಮು...'ವಿನ ತಂಡದ ಜೊತೆಯಾದ ಬಗೆಯನ್ನು ಅವರು ವಿವರಿಸುತ್ತಾರೆ.

ಜನವರಿ ಮಧ್ಯದಲ್ಲಿಯೇ ಈ ಚಿತ್ರದ ಚಿತ್ರೀಕರಣ ಶುರುವಾಗಬೇಕಿತ್ತು. ಆದರೆ ಕೊರೊನಾ ನಿರ್ಬಂಧಗಳ ಕಾರಣದಿಂದ ಮುಂದೂಡಲಾಯಿತು. ಈಗ ಮಾರ್ಚ್‌ನಿಂದ ಚಿತ್ರೀಕರಣವನ್ನು ಆರಂಭಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆಯಂತೆ.

ಮಿಸ್ಟರಿ ಆಫ್ ಮಂಜುಳ', 'ಚಿ.ಸೌ ಕನ್ಯಾಕುಮಾರಿ', 'ಬ್ಲಡ್ ಹ್ಯಾಂಡ್' ಶ್ರುತಿ ನಟಿಸಿರುವ ಇತರ ಸಿನಿಮಾಗಳು. ಈ ಎಲ್ಲ ಸಿನಿಮಾಗಳೂ ಇನ್ನೂ ಬಿಡುಗಡೆಯಾಗಬೇಕಾಗಿದೆ. ಅವರು ನಟಿಸಿದ 'ಬೆಂಕಿ' ಸಿನಿಮಾದ ಟೀಸರ್ ಇತ್ತೀಚೆಗಷ್ಟೆ ಬಿಡುಗಡೆಯಾಗಿದೆ. 'ಜಾಂಟಿ S/o ಜಯರಾಜ್' ಸಿನಿಮಾದಲ್ಲಿಯೂ ಅವರು ಮಹತ್ವದ ಪಾತ್ರದಲ್ಲಿ ನಟಿಸಿದ್ದಾರೆ.

ಸಿನಿಮಾಗಳು ಬಿಡುಗಡೆಯಾಗದಿದ್ದರೂ ಒಂದರ ಹಿಂದೆ ಇನ್ನೊಂದು ಅವಕಾಶಗಳು ಅರಸಿಕೊಂಡು ಬರುತ್ತಿರುವುದು ಶ್ರುತಿಗೆ ಶುಭ ಸೂಚನೆಯಾಗಿಯೇ ಕಂಡಿದೆ. ಹಾಗಾಗಿ ಒಮ್ಮೆ ಸಿನಿಮಾಗಳು ತೆರೆಕಾಣತೊಡಗಿದರೆ ಈ ಅವಕಾಶಗಳು ದುಪ್ಪಟ್ಟಾಗುತ್ತದೆ, ಚಂದನವನದಲ್ಲಿ ತಾನು ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗುತ್ತದೆ ಎಂಬ ಆತ್ಮವಿಶ್ವಾಸದಲ್ಲಿ ಅವರಿದ್ದಾರೆ. ■

